**ಡಿ.ಡಬ್ಲ್ಯು-01**

**ಸಾಕ್ಷಿಯನ್ನು ದಿನಾಂಕಃ 27.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಆರೋಪಿ ಶ್ರೀ. ಜೆ.ಎಸ್.ಆರ್. ವಕೀಲರಿಂದಃ**

ನನ್ನ ಮಧ್ಯಂತರ ಅರ್ಜಿಯ ಜೊತೆ ಕೆಲವು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ದಿನಾಂಕಃ 10.03.2020 ರಂದು ನನ್ನ ಅಣ್ಣನಾದ ಎಲ್. ತಾಂಡವಮೂರ್ತಿರವರು ಪಿರ್ಯಾದಿಯ ಅಣ್ಣನಾದ ಎನ್.ಎಸ್. ರಾಮುರವರ ವಕೀಲರಿಗೆ ಕಳುಹಿಸಿದ ಪ್ರತ್ಯುತ್ತರ ನೋಟೀಸ್ ನ ಧೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು **ನಿ.ಡಿ.-1** ಎಂದು, ಅಸಲು ದಾವೆ ಸಂಖ್ಯೆಃ 27/2020 ರಲ್ಲಿನ ವಾದ ಪತ್ರ, ಪ್ರತಿವಾದ ಪತ್ರ ಹಾಗು ಪಿ.ಡಬ್ಲೂ.-1 ರವರ ಸಾಕ್ಷ್ಯ ವಿಚಾರಣೆಯ ಧೃಡೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ **ನಿ.ಡಿ.-2 ರಿಂದ ನಿ.ಡಿ.-4** ಎಂದು, ದಿನಾಂಕಃ 17.06.2019 ರ ಕ್ರಯ ಒಪ್ಪಂದ ಕರಾರು ಪತ್ರದ ಧೃಡೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು **ನಿ.ಪಿ.-5** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪಿರ್ಯಾದಿ ಪರ ವಕೀಲರಿಂದಃ ಪಾಟೀ ಸವಾಲಿಗಾಗಿ ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿಜೆ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**